ಸುಮತಿ ಮನೆಯನ್ನೆಲ್ಲ ಒಪ್ಪ ಮಾಡುತ್ತಿದ್ದಳು. ಉತ್ತರಭಾರತದ ಪ್ರವಾಸಕ್ಕೆ ಹೋಗಿ ಬಂದು ಮೂರು ತಿಂಗಳಾದರೂ ಮನಸ್ಸು ಇನ್ನೂ ಅಲ್ಲೇ ನೆಲೆಸಿತ್ತು. ಅವತ್ತು ಶನಿವಾರವಾದ್ದರಿಂದ ಗಂಡ ಮತ್ತು ಮಗ ಇಬ್ಬರೂ ಮನೆಯಲ್ಲೇ ಇದ್ದರು. ತಿಂಡಿ, ಅಡುಗೆ ಎಲ್ಲ ಮುಗಿಸಿ ಓರಣ ಮಾಡಿಟ್ಟು ಮೊಬೈಲ್‌ನಲ್ಲಿ ಫೋಟೊಗಳನ್ನು ನೋಡುತ್ತಾ ಕುಳಿತಿದ್ದಳು. ಮಗ ಅಂಕಿತ ಒಂದು ಸಾಫ್ಟ್‌ವೇರ್ ಕಂಪನಿಯಲ್ಲಿ ಉದ್ಯೋಗಸ್ಥನಾಗಿದ್ದರೂ ಅಮ್ಮನಿಗೆ ಅಂಟಿಕೊಳ್ಳುವ ಮನಃಸ್ಥಿತಿ. ಎಲ್ಲದಕ್ಕೂ ಅಮ್ಮ ಬೇಕು. ಅದರಲ್ಲೂ ರಜೆ ಇದ್ದರೆ ಅಮ್ಮ ಅವನ ಸುತ್ತಮುತ್ತಲೇ ಓಡಾಡುತ್ತಿರಬೇಕು. ಇದೇ ಕಾರಣದಿಂದ ರಜೆ ಇದ್ದರೂ ಕೂಡ ಸುಮತಿ ಮನೆ ಬಿಟ್ಟು ಎಲ್ಲೂ ಹೋಗುತ್ತಿರಲಿಲ್ಲ. ಹೋದರೆ ಎಲ್ಲರೂ ಒಟ್ಟಿಗೇ ಹೋಗುವುದು. ಇಲ್ಲದಿದ್ದರೆ ಇಲ್ಲ ಎಂಬ ತೀರ್ಮಾನಕ್ಕೆ ತಾನೇ ಬಂದುಬಿಟ್ಟಿದ್ದಳು. 'ಅಮ್ಮಾ... ಏನು ಮಾಡ್ತ ಇದ್ದೀಯ?' ಅಂಕಿತ ರೂಮಿನಿಂದಲೇ ಕೂಗಿದ. 'ಅಮ್ಮ ಏನೋ ಮಾಡ್ತ ಇರ್ತಾರೆ ಬಿಡೋ... ಯಾಕೆ ಡಿಸ್ಟರ್ಬ್ ಮಾಡ್ತೀಯ' ತಂದೆ ತನ್ನ ರೂಮಿನಿಂದ ಹೇಳಿದರು. ಸುಮತಿಯ ಕಿವಿಗೆ ಏನೂ ಬಿದ್ದೇ ಇಲ್ಲ. ಅವಳು ಫೋಟೊಗಳಲ್ಲಿ ಕಳೆದುಹೋಗಿದ್ದಳು. 'ಅಮ್ಮಾ... ಇಲ್ಲೇ ಬಾಮ್ಮ...' ಮತ್ತೆ ಕೂಗಿದ. 'ಸುಮ್ನೆ ಇರೋ...' ತಂದೆ ಗದರಿದರು. 'ನಿನ್ನ ಕೆಲಸ ಮಾಡಿಕೊ. ಅಮ್ಮಂಗೆ ಯಾಕೆ ಡಿಸ್ಟರ್ಬ್ ಮಾಡ್ತೀಯ?' ರೇಗಿದರು. 'ನಿಂಗೇನ್ ಕಷ್ಟ. ನಾನು ಕರೆದಿದ್ದು ಅಮ್ಮನ್ನ... ನಿಮ್ಮನ್ನಲ್ಲವಲ್ಲ...' ಎಂದವನೇ, ಮತ್ತೆ ಕೂಗಿದ 'ಅಮ್ಮಾ...' ಕೂಗುತ್ತಲೇ ಎದ್ದು ಬಂದ. ಸುಮತಿ ಫೋಟೊ ನೋಡುತ್ತಲೇ ಮೈಮರೆತಿದ್ದಳು. ಅವನು ಬಗ್ಗಿ ನೋಡಿದ. ಫೋಟೊ... ಜೈಪುರ ಮ್ಯೂಸಿಯಂದು. ಒಂದು ಮರದ ಪೆಟ್ಟಿಗೆಯಲ್ಲಿ ಒಂದು ಬೆಳ್ಳಿಯ ಕಡಗ (ಪಾಟ್ಲಿ) ಮತ್ತು ಒಂದು ಹಳದಿ ಬಣ್ಣದ ಮಾಸಿದ ಕರವಸ್ತ್ರ ಅಲ್ಲಲ್ಲಿ ಕರೆ ಕರೆ. ಅಮ್ಮ ನೋಡುತ್ತಲೇ ಇದ್ದಾಳೆ. ಅಲ್ಲಿ ಕೂಡ ಆ ಫೋಟೊ ಬೇಕು ಅಂತ ಕೇಳಿ ಕೇಳಿ ಎರಡು ಮೂರು ಸಲ ಕ್ಲಿಕ್ಕಿಸಿಕೊಂಡಿದ್ದಳು. ಏನಿದೆ ಅದರಲ್ಲಿ ವಿಶೇಷ. ಮ್ಯೂಸಿಯಂ ಅದೂ ರಾಜಮನೆತನದ್ದು ಅಂದ್ರೆ ಅವರ ಕೂದಲಿಂದ ಹಿಡಿದು ಎಲ್ಲವನ್ನೂ ಜೋಪಾನವಾಗಿ ಇಟ್ಟಿರ್ತಾರಪ್ಪ... ಇದೇನು ಮಹಾ ಅಂತ ಅದೆಷ್ಟು ಸಲ ಅಂದುಕೊಂಡಿದ್ದನೋ. ಅಮ್ಮ ಸಿಡುಕುತ್ತಾಳೆ ಎಂಬ ಭಯದಿಂದ ಮಾತಾಡದೆ ಫೋಟೊ ಕ್ಲಿಕ್ಕಿಸಿದ್ದ. 'ಪ್ರವಾಸಕ್ಕೆ ಹೋದಾಗ ಅಮ್ಮ ಏನು ಹೇಳುತ್ತಾಳೋ ಅದನ್ನು ಮಾಡು' ಎಂಬ ಅಪ್ಪನ ಕಟ್ಟಪ್ಪಣೆ ಅವನ ಚಿಕ್ಕವಯಸ್ಸಿನಿಂದಲೂ ಜಾರಿಯಲ್ಲಿತ್ತು. ಆದರೆ ಈಗ ದೊಡ್ಡವನಾದಾಗ... ಕೆಲಸವಿಲ್ಲದ ವಿಚಾರಗಳಿಗೆ ಅಮ್ಮ ತುಂಬಾ ತಲೆ ಕೆಡಿಸಿಕೊಳ್ಳುತ್ತಾಳೆ ಎಂಬುದು ಅವನ ನಿಲುವು. ಅವಳ ಪಕ್ಕ ಕುಳಿತ... 'ಅಮ್ಮಾ...' ಮುದ್ದುಗರೆಯುತ್ತಾ ಕರೆದ. ಸುಮತಿ ಅವನ ಮುಖ ನೋಡಿದಳು. ಅವಳ ಮುಖದ ತುಂಬಾ ವೇದನೆಯ ಅಲೆಗಳು ಕಂಡವು. 'ಅಮ್ಮಾ... ಅಳ್ತಾ ಇದ್ದೀಯ?' ಜೋರಾಗಿ ನಕ್ಕು ಬಿಟ್ಟ. 'ಅದೂ ...ಈ ಕಿತ್ತು ಹೋಗಿರೋ ಕರ್ಚೀಫ್ ಮತ್ತೆ ಕಿಲುಬು ಅಂಟಿರೋ ಕಡಗ... ಹಯ್ಯೋ... ಏನು ಹೇಳಬೇಕೋ ನಿನ್ನ ಬುದ್ಧಿಗೆ... ಅಪ್ಪಾ... ಇಲ್ಲಿ ಬಾಪ್ಪ... ಅಮ್ಮ ಅಳ್ತ ಇದ್ದಾರೆ...' ಸುಮತಿಯ ನಿಟ್ಟುಸಿರು ಅವನಿಗೆ ತಾಕಲಿಲ್ಲ. ತಂದೆ ಎದ್ದು ಬಂದರು. 'ಸುಮೀ... ಏನಾಯ್ತು?' ಅಂದರು. 'ಏನೂ ಇಲ್ಲ. ನಿಮ್ಮ ಕೆಲಸ ಮಾಡಿಕೊಳ್ಳಿ. ಇವನಿಗೆ ಬೇರೆ ಕೆಲಸ ಇಲ್ಲ... ನಾನೇನೋ ಯೋಚಿಸ್ತಿದ್ದೆ' ಅಂದಳು. 'ಅಮ್ಮ... ನೀನು ಖಂಡಿತ ಯೋಚಿಸ್ತಿರಲಿಲ್ಲ. ಸುಳ್ಳು ಹೇಳಬೇಡ. ಈ ಥರ ಕಡಗ ನಿನ್ನ ಹತ್ರ ಇತ್ತಾ? ನೀನು ಕಳೆದುಕೊಂಡೆಯಾ?...' ಪ್ರೀತಿಯಿಂದ ಕೇಳಿದ ಅಂಕಿತ. 'ಬೇಕಿದ್ರೆ ಇವತ್ತೇ ಹೋಗೋಣ ಅಂಗಡಿಗೆ. ಇಂಥದ್ದೇ ತೆಗೆದುಕೊಡ್ತೀನಿ... ನೀನು ಅಳಬೇಡ ಅಷ್ಟೆ... ಯಾವ್ದೋ ಲಡಕಾಸಿ ಬಳೆ ಇಟ್ಕೊಂಡು... ಏನಮ್ಮ ಇದು!' ಬೇಸರದಿಂದ ನುಡಿದ.

ಸುಮತಿ ನಿಡುಸುಯ್ದಳು. 'ಸರಿ ಪುಟ್ಟ. ಲಡಕಾಸಿ, ಕಿತ್ತು ಹೋಗಿರೋದು ಅಂತೆಲ್ಲ ಅಂತಿದ್ದೀಯಲ್ಲ... ಇದರ ಕತೆ ಗೊತ್ತಾ ನಿಂಗೆ?'